## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 855 (985)

ಸದಸ್ಯರ ಹೆಸರು : ಶ್ರೀ ಐವನ್ ಡಿ ಸೋಜಾ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವವರು : ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು

ಉತ್ತರಿಸಬೇಕಾದ ದಿನಾಂಕ : 19.12.2018

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ ಇತ್ತೀಚಿನ ಪ್ರಕೃತಿ ವಿಕೋಪದಿಂದ ಉಂಟಾದ ಒಟ್ಟು ನಷ್ಟ ಎಷ್ಟು; (ಕಂದಾಯ ಇಲಾಖೆ) ಪ್ರಕೃತಿ ವಿಕೋಪದಿಂದ ನಿರಾಶ್ರಿತರಾದವರಿಗೆ ಕೈಗೊಂಡ ಪುನರ್ ವಸತಿ ಕ್ರಮಗಳೇನು; ಅಂದಾಜಿಸಲಾದ ನಷ್ಟ ಎಷ್ಟು; ಸರ್ಕಾರ ಭರಿಸಲಾದ ಮೊತ್ತ ಎಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಕೊಡಗು ಜಿಲ್ಲೆ ಸೇರಿದಂತೆ 8 ಜಿಲ್ಲೆಗಳಲ್ಲಿ ಆಗಸ್ಟ್ ಮಾಹೆಯಲ್ಲಿ ಉಂಟಾದ ಪ್ರವಾಹ ಮತ್ತು ಭೂ ಕುಸಿತದಿಂದ ಅಂದಾಜು ರೂ.4262.09 ಕೋಟಿ ನಷ್ಟ ಉಂಟಾಗಿರುತ್ತದೆ.<br><br>ಪ್ರವಾಹ ಪರಿಹಾರಕ್ಕಾಗಿ ಸರ್ಕಾರದಿಂದ ಕೈಗೊಂಡ ಕ್ರಮಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿದೆ. |
| 2 | ಪ್ರಕೃತಿ ವಿಕೋಪಕ್ಕೆ ತುತ್ತಾದವರಿಗೆ ರಾಜ್ಯದ ಜನರಿಂದ ರಾಜ್ಯ ಸರ್ಕಾರ ಸಂಗ್ರಹಿಸಲಾದ ಹಣ ರೂಪದ ದೇಣಿಗೆ ಎಷ್ಟು; ಕೈಗಾರಿಕೆಗಳು ನೀಡಿದ ಹಣ ಎಷ್ಟು; ಇದನ್ನು ಯಾವ ಯಾವ ಉದ್ದೇಶಕ್ಕೆ ಬಳಕೆ ಮಾಡಲಾಗಿದೆ:(ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ ಉಂಟಾದ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದಿನಾಂಕ 15.12.2018 ರವರೆಗೆ ಒಟ್ಟು ರೂ.109.57 ಕೋಟಿ ಸಾರ್ವಜನಿಕರು ಹಾಗೂ ವಿವಿಧ ಸಂಸ್ಥೆಗಳಿಂದ ಸಂಗ್ರಹವಾಗಿರುತ್ತದೆ. ಸದರಿ ಹಣವನ್ನು ಈ ಕೆಳಕಂಡ ಪರಿಹಾರಗಳಿಗೆ ಕೈಗೊಳ್ಳಲಾಗಿದೆ.<br>1. ರೂ.82.74ಕೋಟಿ ಮನೆ ನಿರ್ಮಾಣಕ್ಕಾಗಿ<br>2. ರೂ.31.63ಕೋಟಿ ಬಡಾವಣೆಗಳ ಮೂಲಭೂತ ಸೌಕರ್ಯಕ್ಕಾಗಿ<br>3. ಪ್ರತಿ ಕುಟುಂಬ ರೂ.50,000/- ಪ್ರತಿ ಭಾದಿತ ಕುಟುಂಬಗಳು ಗೃಹೋಪಯೋಗಿ ಸಲಕರಣೆಗಳನ್ನು ಖರೀದಿಸಲು ರೂ.6.00ಕೋಟಿ.<br>4. ಪ್ರತಿ ಮಾಹೆ ರೂ.10,000/- ನಿರಾಶ್ರಿತರ ಮಾಸಿಕ ಬಾಡಿಗೆ ಪಾವತಿಸಲು |

....2

| | | |
|---|---|---|
| 3 | ಪ್ರಕೃತಿ ವಿಕೋಪದಿಂದ ಉಂಟಾದ ಹಾನಿ ಎಷ್ಟು; ನೀಡಿದ ಪರಿಹಾರ ಎಷ್ಟು; ಬಾಕಿ ಇರುವ ಪ್ರಕರಣಗಳೆಷ್ಟು; (ವಿವರ ಒದಗಿಸುವುದು) | ಪ್ರವಾಹ ಹಾಗೂ ಭೂ ಕುಸಿತದಂತಹ ಪ್ರಕೃತಿ ವಿಕೋಪದಿಂದ ಅಂದಾಜು ರೂ.4262.09 ಕೋಟಿ ನಷ್ಟ ಉಂಟಾಗಿರುತ್ತದೆ.<br><br>ಪರಿಹಾರ ಕ್ರಮಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 4 | ವಿಕೋಪಕ್ಕೆ ಒಳಗಾಗಿ ನಷ್ಟ ಅನುಭವಿಸಿದ ಖಾಸಗಿ ಬೆಳೆಗಾರರಿಗೆ ಇಲಾಖೆಯಿಂದ ಸಹಕಾರ ನೀಡಲಾಗಿದೆಯೇ; ನೀಡಲಾಗಿದ್ದರೆ ಎಷ್ಟು ಮೊತ್ತ ಕಾಯ್ದಿರಿಸಲಾಗಿದೆ: (ವಿವರ ನೀಡುವುದು) | ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದ 8 ಜಿಲ್ಲೆಗಳ ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ಸರ್ಕಾರದಿಂದ ರೂ.722.03 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ Memorandum ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ ರೂ.525.22 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಪ್ರವಾಹದಿಂದ ಬೆಳೆಹಾನಿಯಾದ ರೈತರಿಗೆ ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಬೆಳೆಹಾನಿ ಪರಿಹಾರಕ್ಕಾಗಿ ರೂ.322.87 ಕೋಟಿಗಳ ಇನ್‌ಪುಟ್ ಸಬ್ಸಿಡಿಯಿದ್ದು, ಇದನ್ನು ರೈತರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಪಾವತಿಸಲಾಗುವುದು. ಉಳಿದ ಮೊತ್ತವನ್ನು ಪ್ರಮಾಣಾನುಪಾತದಲ್ಲಿ ಮೂಲಭೂತ ಸೌಕರ್ಯದ ದುರಸ್ಥಿಗಾಗಿ ವಿನಿಯೋಗಿಸಲಾಗುವುದು. |
| 5 | ಕೇಂದ್ರ ಸರ್ಕಾರದಿಂದ ಪ್ರಕೃತಿ ವಿಕೋಪಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; ಬೇಡಿಕೆ ಎಷ್ಟು; (ವಿವರ ನೀಡುವುದು) | |

ಕಂಇ 297 ಟಿಎನ್‌ಆರ್ 2018

(ಆರ್.ವಿ. ದೇಶಪಾಂಡೆ)
ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ
ಹಾಗೂ ಜೀವನೋಪಾಯ ಸಚಿವರು

## ಅನುಬಂಧ

**ಪ್ರವಾಹ ಪರಿಸ್ಥಿತಿ ಎದುರಿಸಲು ಸರ್ಕಾರದಿಂದ ಕೈಗೊಂಡ ಕ್ರಮಗಳು**

- ಕೊಡಗು ಜಿಲ್ಲಾಡಳಿತವು ಶೋಧನಾ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಭಾರತೀಯ ಸೇನೆ, ನೌಕಾದಳ, ವಾಯುಸೇನೆ, ಎನ್.ಡಿ.ಆರ್.ಎಫ್. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ, ಎಸ್.ಡಿ.ಆರ್.ಎಫ್., ಸಿವಿಲ್ ಡಿಫೆನ್ಸ್, ಗೃಹರಕ್ಷಕ ದಳ, ಎನ್.ಸಿ.ಸಿ 1019 ಸಿಬ್ಬಂದಿಯ ಮೂಲಕ ಹಾಗೂ ಇತರೆ ಸರ್ಕಾರೇತರ ಸಹಾಯದಿಂದ 4450 ನಿರಾಶ್ರಿತರನ್ನು ರಕ್ಷಿಸಲಾಗಿದೆ.
- ಪ್ರವಾಹಪೀಡಿತ ಪ್ರದೇಶಗಳಲ್ಲಿ 92 ಗಂಜಿಕೇಂದ್ರಗಳನ್ನು ತೆರೆದು ಅದರಲ್ಲಿ 10160 ಜನರಿಗೆ ಆಹಾರ ಮತ್ತು ತಾತ್ಕಲಿಕ ವಸತಿಯನ್ನು ಮಾಡಲಾಗಿರುತ್ತದೆ, ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 07 ಗಂಜಿಕೇಂದ್ರಗಳಲ್ಲಿ 515 ಜನರಿಗೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.
- ಎಸ್.ಡಿ.ಆರ್.ಎಫ್ ಅಡಿ ಪ್ರವಾಹ ಪೀಡಿತ 8 ಜಿಲ್ಲೆಗಳಿಗೆ ರೂ.58.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.
- ಪ್ರವಾಹದಿಂದ ಮೃತಪಟ್ಟಿರುವ 67 ಪ್ರಕರಣಗಳಿಗೆ ತಲಾ ರೂ.7.00 ಲಕ್ಷಗಳಂತೆ ಮರಣ ಹೊಂದಿದವರ ವಾರಸುದಾರರಿಗೆ ಪಾತಿಸಲಾಗಿದೆ. (ಎಸ್.ಡಿ.ಆರ್.ಎಫ್. / ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ರೂ.4.00 ಲಕ್ಷ, ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ರೂ.1.00 ಲಕ್ಷಗಳು ಹಾಗೂ ಮಾನ್ಯ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ರೂ.2.00 ಲಕ್ಷ).
- ಕೊಡಗು ಜಿಲ್ಲೆಯ ನೆರೆಹಾವಳಿಯಿಂದ ಮನೆ ಹಾನಿಯಾದ ಬಾಧಿತ ಕುಟುಂಬಗಳು ಗೃಹೋಪಯೋಗಿ ಸಲಕರಣೆಗಳನ್ನು (Utensils and Clothing) ಖರೀದಿಸಲು ಮಾರ್ಗಸೂಚಿಯಂತೆ ರೂ.3,800/- ಸೇರಿ ಹೆಚ್ಚುವರಿಯಾಗಿ ರೂ.50,000/- ವಿಶೇಷ ಅನುದಾನ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪಾವತಿಸಲಾಗುತ್ತಿದೆ.
- ಪ್ರವಾಹದಿಂದ ಉಂಟಾಗಿರುವ ಮನೆ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ಪರಿಹಾರ ವಿತರಿಸಲಾಗುತ್ತಿದೆ. (ಶೇ.15 ರಷ್ಟು ಮನೆ ಹಾನಿಯಾದಲ್ಲಿ ರೂ.5,200/- ಹಾಗೂ ಪೂರ್ಣ ಮನೆಹಾನಿಯಾದಲ್ಲಿ ರೂ.95,100/- (ರೂ.95,100/- ಸಮತಟ್ಟಾದ ಪ್ರದೇಶ ಮತ್ತು ರೂ.1,01,900/- ಗುಡ್ಡಗಾಡು ಪ್ರದೇಶ) ಶೇಕಡ 75 ರಷ್ಟು ಮನೆಹಾನಿಯಾದ ಪ್ರಕರಣಗಳನ್ನು ಪೂರ್ಣ ಮನೆ ಹಾನಿಯೆಂದು ಪರಿಗಣಿಸಿ ಪಾವತಿಸಲಾಗುತ್ತಿದೆ. ಸದರಿ ಕುಟುಂಬಗಳು ವಿವಿಧ ವಸತಿ ಯೋಜನೆಯಡಿ ಪರಿಹಾರ ಪಡೆಯಲು ಆದ್ಯತೆ ನೀಡಲಾಗುವುದು.
- ಕೊಡಗು ಜಿಲ್ಲೆಯಲ್ಲಿ ಪ್ರವಾಹದಿಂದ ಮನೆ ಕಳೆದುಕೊಂಡ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸಲು 840 ಮನೆಗಳ ನಿರ್ಮಾಣಕ್ಕಾಗಿ ಪ್ರತಿ ಮನೆಗೆ ರೂ.9.85 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ರೂ.82.74 ಕೋಟಿ ಹಾಗೂ ಬಡಾವಣೆಗಳು ಮತ್ತು ಸಂಪರ್ಕ ರಸ್ತೆ ಹಾಗೂ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ರೂ.31.63 ಕೋಟಿಗಳನ್ನು ವಸತಿ ಇಲಾಖೆಯಿಂದ ಮಂಜೂರಾತಿ ನೀಡಿದೆ.
- ಕೊಡಗು ಜಿಲ್ಲೆಯಲ್ಲಿ ಪ್ರವಾಹದಿಂದ ನಿರಾಶ್ರಿತರಾದ ಕುಟುಂಬಗಳಿಗೆ ಮನೆ ನಿರ್ಮಿಸಿಕೊಡುವವರೆಗೆ ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರತೀ ತಿಂಗಳು ರೂ.10,000 ಗಳನ್ನು (ನವೆಂಬರ್ 2018 ರಿಂದ 10 ತಿಂಗಳವರೆಗೆ) ಪಾವತಿಸಲು ವಸತಿ ಇಲಾಖೆಯಿಂದ ಮಂಜೂರಾತಿ ನೀಡಿದೆ.
- ರಾಜ್ಯ ಸರ್ಕಾರವು 8 ಜಿಲ್ಲೆಗಳ 45 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶವೆಂದು ದಿನಾಂಕ:29.09.2018ರ ಆದೇಶದಲ್ಲಿ ಘೋಷಿಸಿದೆ. ಇದರಿಂದ, ಸಂತ್ರಸ್ಥರು ಸರ್ಕಾರಿ ದಾಖಲೆಗಳು ಹಾಗೂ

ವಿಮಾ ಸೌಲಭ್ಯವನ್ನು ಉಚಿತವಾಗಿ ಪಡೆಯಲು ಅರ್ಹರಾಗಿರುತ್ತಾರೆ (ಕಳೆದು ಹೋದ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಭೂಮಿ ದಾಖಲೆಗಳು ಇತ್ಯಾದಿ)

- ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿಗೆ ಭಾರತೀಯ ರಿಸರ್ವ್ ಬ್ಯಾಂಕಿನ 2017ರ ನಿರ್ದೇಶನದ ಪ್ರಕಾರ ಈ ಕೆಳಕಂಡ ಪರಿಹಾರವನ್ನು ನೀಡಲು ನಿರ್ದೇಶನ ನೀಡಲಾಗಿದೆ.

  ಅ) ಸಾಲ ವಸೂಲಾತಿ ಅವಧಿಯನ್ನು ಕನಿಷ್ಠ 3 ತಿಂಗಳ ಅವಧಿಗೆ ಮುಂದೂಡಲು.

  ಆ) ಸಾಲದ ಅವಧಿಯನ್ನು 1 ವರ್ಷದ ವರೆಗೆ ಹೆಚ್ಚಿಸುವುದು.

  ಇ) ಬೆಳೆ ಸಾಲದ ಮೊತ್ತವನ್ನು ಕನಿಷ್ಠ 5 ವರ್ಷಗಳ ಅವಧಿಗೆ ಪರಿವರ್ತಿಸುವುದು.

  ಈ) ಹೊಸ ಸಾಲವನ್ನು ನೀಡಲು ಅವಕಾಶ ಕಲ್ಪಿಸುವುದು.

- ರಾಜ್ಯದ ಕೊಡಗು ಜಿಲ್ಲೆಗೆ ಸೇರಿ 8 ಜಿಲ್ಲೆಗಳಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರೂ.722.53 ಕೋಟಿ ಆರ್ಥಿಕ ನೆರವನ್ನು ಕೋರುತ್ತಾ, ದಿನಾಂಕ: 30-08-2018ರಂದು ಕೇಂದ್ರೀಯ ಗೃಹ ಸಚಿವರು ಹಾಗೂ ದಿನಾಂಕ: 10-09-2018ರಂದು ಮಾನ್ಯ ಪ್ರಧಾನ ಮಂತ್ರಿಯವರನ್ನು ಬೇಟಿ ಮಾಡಿ ಮೆಮೊರಾಂಡಮ್ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ಎನ್.ಡಿ.ಆರ್.ಎಫ್. ಅಡಿ ರೂ.525.22 ಕೋಟಿಗಳು ಬಿಡುಗಡೆಯಾಗಿದೆ.

- ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ಪ್ರವಾಹದಿಂದ ಹಾನಿಯಾದ ಮೂಲಭೂತಸೌಕರ್ಯಗಳಾದ ರಸ್ತೆ, ಸೇತುವೆ/ಕಲ್ವರ್ಟ, ವಿದ್ಯುತ್ ಪರಿಕರಗಳು ಇತ್ಯಾದಿಗಳನ್ನು ಮನರ್ ಸ್ಥಾಪಿಸಲು ರೂ.200.00 ಕೋಟಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

- ಸದರಿ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದೆ ಕೈಗೊಳ್ಳಲು ಕೆ.ಟಿ.ಟಿ.ಪಿ. ಕಲಂ 4(ಜಿ) ರಡಿ ಪಾರದರ್ಶಕತೆಯಿಂದ ವಿನಾಯಿತಿ ನೀಡಿದೆ. ಇಲಾಖಾವಾರು ಹಂಚಿಕೆಯಾದ ವಿವರ ಕೆಳಕಂಡಂತಿದೆ.

| ಇಲಾಖೆಗಳು | ಕೊಡಗು | ದಕಿಣ ಕನ್ನಡ | ಉಡುಪಿ | ಚಿಕ್ಕಮಗಳೂರು | ಹಾಸನ | ಉತ್ತರ ಕನ್ನಡ | ಶಿವಮೊಗ್ಗ | ಒಟ್ಟು |
|---|---|---|---|---|---|---|---|---|
| ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ | 33.15 | 5.40 | 3.75 | 13.62 | 12.68 | 5.10 | 5.86 | 79.56 |
| ಲೋಕೋಪಯೋಗಿ ಇಲಾಖೆ | 44.35 | 10.56 | 8.68 | 5.87 | 10.57 | 4.36 | 7.83 | 92.22 |
| ಇಂಧನ | 2.06 | 1.17 | 0 | 0 | 0.23 | 1.39 | 0.36 | 5.21 |
| ನಗರಾಭಿವೃದ್ಧಿ ಇಲಾಖೆ | 3.62 | 3.52 | 1.17 | 3.29 | 3.52 | 0.34 | 0.64 | 16.10 |
| ನೀರಾವರಿ ಇಲಾಖೆ | 1.82 | 0.23 | 0.94 | 2.35 | 0.94 | 0.32 | 0.31 | 6.91 |
| ಒಟ್ಟು | 85.00 | 20.88 | 14.54 | 25.13 | 27.94 | 11.51 | 15.00 | 200.00 |

- ಪ್ರವಾಹದಿಂದ ಬೆಳೆ ಹಾನಿಯಾದ ರೈತರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ಇನ್‌ಪುಟ್ ಸಬ್ಸಿಡಿ ಪಾವತಿಸಲು, ಪರಿಹಾರ ತಂತ್ರಾಂಶದ ಮೂಲಕ ಪರಿಹಾರ ನೀಡಲು ರೈತರ ಮಾಹಿತಿಯನ್ನು ಸಂಗ್ರಹಿಸಿ, ಡಾಟಾ ಎಂಟ್ರಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಪ್ರಸ್ತುತ ರೂ.6.63 ಕೋಟಿ ಮೊತ್ತವನ್ನು ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳ 6342 ರೈತರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ. ಮೂಲಕ ಜಮಾ ಮಾಡಲಾಗಿದೆ.

- ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಇನ್‌ಪುಟ್ ಸಬ್ಸಿಡಿಯನ್ನು ಈ ಕೆಳಕಂಡ ದರದಲ್ಲಿ ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸಿಮಿತಗೊಳಿಸಿ ಪಾವತಿಸಲಾಗುತ್ತದೆ.

ಮಳೆ ಆಶ್ರಿತ ರೂ. 6,800/- ಪ್ರತಿ ಹೆಕ್ಟೇರ್‌ಗೆ

ನೀರಾವರಿ ಬೆಳೆ ರೂ.13,500/- ಪ್ರತಿ ಹೆಕ್ಟೇರ್‌ಗೆ

ಬಹು ವಾರ್ಷಿಕ ಬೆಳೆ ರೂ.18,000/- ಪ್ರತಿ ಹೆಕ್ಟೇರ್‌ಗೆ

ಭೂ ಕುಸಿತದಿಂದ ಕೃಷಿ ಭೂಮಿ ಹಾನಿ ರೂ.37,500/- ಪ್ರತಿ ಹೆಕ್ಟೇರ್‌ಗೆ

ಕೃಷಿ ಭೂಮಿ ಹೂಳು ತೆಗೆಯಲು ರೂ.12,200/- ಪ್ರತಿ ಹೆಕ್ಟೇರ್‌ಗೆ

- ಕೊಡಗು ಪುನರ್ ನಿರ್ಮಾಣ, ಪುನರ್ ವಸತಿ ಅಭಿವೃದ್ಧಿ ಪ್ರಾಧಿಕಾರವನ್ನು (ಕೆ.ಆರ್.ಆರ್.ಡಿ.ಎ) ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆ ಹಾಗೂ ಕಂದಾಯ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರ ಉಪಾಧ್ಯಕ್ಷತೆಯಲ್ಲಿ ದಿನಾಂಕ: 06-12-2018 ರಂದು ಸಮಿತಿ ರಚಿಸಲಾಗಿದೆ.

- ಕೆ.ಆರ್.ಆರ್.ಡಿ.ಎ ಮೂಲಕ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಹಾಗೂ ನಿರಾಶ್ರಿತರೊಗೆ ವಸತಿ ಸೌಲಭ್ಯ ಕಲ್ಪಿಸಲು ವಿವಿಧ ಇಲಾಖೆಗಳೊಂದಿಗೆ ಸಮನ್ವಯದೊಂದಿಗೆ ಅನುಷ್ಠಾನಗೊಳಿಸಲಾಗುವುದು.

- ಕೊಡಗು ಜಿಲ್ಲೆಯಲ್ಲಿ ಪ್ರವಾಹ ಹಾಗೂ ಭೂ ಕುಸಿತದಿಂದ ಹಾನಿಯಾದ ರಸ್ತೆಗಳ ಪುನರ್ ನಿರ್ಮಾಣಕ್ಕಾಗಿ Border Road Organization, Government of India ರವರ (ಶ್ರೀ ಆರ್.ಎಸ್.ರಾವ್ ರವರ ನೇತ್ರತ್ವದಲ್ಲಿ ಲೆಫ್ಟಿನೆಮಟ್ ಕರ್ನಲ್ ಮನೀಶಕುಮಾರ್ ಹಾಗೂ ಶ್ರೀ.ದಿನೇಶಕುಮಾರ್ ರವರ ತಂಡವು ರಾಷ್ಟ್ರೀಯ ಹೆದ್ದಾರಿ,. ರಾಜ್ಯ ಹೆದ್ದಾರಿ ಹಾಗೂ ಗ್ರಾಮೀಣ ರಸ್ತೆಗಳನ್ನು ಬೇಟಿ ನೀಡಿದ್ದಾರೆ) ಮೂಲಕ ತಾಂತ್ರಿಕ ಸಲಹೆ ಪಡೆಯಲಾಗಿದೆ.

- ಭೂ ಕುಸಿತದ ಕುರಿತು ಅಧ್ಯಾಯನವನ್ನು Geological Survey of India ಹಾಗೂ ಕೆ.ಎಸ್.ಎನ್.ಡಿ.ಎಮ್.ಸಿ. ಮೂಲಕ ಕೊಡಗು ಜಿಲ್ಲೆಯಲ್ಲಿ ಭೂ ಕುಸಿತದಿಂದ ಹಾನಿಯಾದ ರಸ್ತೆಗಳ ಪೂರ್ಣ ದಾಖಲೆಗಳನ್ನು ಸಂಗ್ರಹಿಸಿದ್ದು, ಇದರಿಂದ, ಜಿಲ್ಲಾಡಳಿತವು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ.

- ಕೊಡಗು ಜಿಲ್ಲೆಯಲ್ಲಿ ಭೂಕಂಪವಾಗುವ ಮಾಹಿತಿ ಪಡೆಯಲು ಎನ್.ಜಿ.ಆರ್.ಐ. (NGRI-National Geophysical Research Institute) ಮೂಲಕ ಭೂ ಕಂಪನ ಮಾಪಕ ಕೇಂದ್ರವನ್ನು ನವೋದಯ ಶಾಲೆಯಲ್ಲಿ ಅಳವಡಿಸಲಾಗಿದೆ.

***